ಓ.ಎಸ್. ನಂ. **386/2008**
**ಡಿ.ಡಬ್ಲ್ಯೂ-1**

**(ಇಂದು ದಿನಾಂಕಃ 08-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

ಮುಂದುವರೆದ ಪಾಟೀ ಸವಾಲು :ವಾದಿ ಪರ ವಕೀಲರಿಂದಃ

ಸರ್ವೇ ನಂ.132/4 ನೇದ್ದರ ಉತಾರವನ್ನು ಹಾಜರು ಪಡಿಸಿರುವುದಿಲ್ಲ. ಅದೇ ರೀತಿ ಪ್ಲಾಟ ನಂ.9 ರ ಉತಾರವನ್ನು ಕೂಡಾ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಸರ್ವೆ ನಂ.89 ಪ್ಲಾಟ ನಂ.8 ನೇದ್ದವುಗಳ ಉತಾರಗಳನ್ನು ಕೂಡಾ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದುಂಡಪ್ಪ ಹಮ್ಮಿನಿ ರವರ ನೀರಾವರಿ ಇಲಾಖೆಯಲ್ಲಿ ಪಾಟ್ಕರ ಎಂದು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ದೂಪದಾಳ ಗ್ರಾಮದ ಸರ್ವೇ ನಂ.89/2-ಪಿ2 ನೇದ್ದರ ಉತಾರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮದಲಬಾವಿ ಗ್ರಾಮದ ಸರ್ವೇ ನಂ.124/1 ನೇದ್ದರ ಉತಾರವನ್ನು ಹಾಜರು ಪಡಿಸಿರುವುದಿಲ್ಲ. ಅದೇ ರೀತಿ ಪ್ಲಾಟ ನಂ.840 ಸರ್ವೇ ನಂ.8/4 ಬ ನೇದ್ದರ ಉತಾರವನ್ನು ಹಾಜರು ಪಡಿಸಿರುವುದಿಲ್ಲ. ಅಡಿಬಟ್ಟಿ ಗ್ರಾಮದ ಸರ್ವೇ ನಂ.121/1 ನೇದ್ದರ ಉತಾರವನ್ನು ಹಾಜರು ಪಡಿಸಿರುವುದಿಲ್ಲ. ಈ ಹಿಂದೆ ನ್ಯಾಯಾಲಯಕ್ಕೆ ಅರ್ಜಿ ಕೊಟ್ಟಿರುವ ಎಲ್ಲಾ ಆಸ್ತಿಗಳ ಉತಾರಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ನನ್ನ ಹೆಸರಿಗೆ ಇದ್ದ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಅದನ್ನು ಹೊರತು ಪಡಿಸಿ ಬೇರೆ ಯಾವುದೆ ಡೈರಿ ಹಾಜರು ಪಡಿಸಿರುವುದಿಲ್ಲ. ಈ ಆಸ್ತಿ ಹೇಗೆ ಬಂತು ಎನ್ನುವುದರ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನಗೆ ವಾದಿ ನಂ.2 ಯಾರು ಎಂದು ಗೊತ್ತಿರುವುದಿಲ್ಲ. ಅದೇ ರೀತಿ ನನಗೆ 1 ನೇ ವಾದಿ ಯಾರು ಎಂದು ಗೊತ್ತಿರುವುದಿಲ್ಲ. 1 ಮತ್ತು 2 ವಾದಿಯವರು ಎದರ ಬಗ್ಗೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರು ಈ ದಾವೆಯಲ್ಲಿ ಸಲ್ಲಿಸಿರುವ ವಾದ ಪತ್ರವನ್ನು ನಾನು ಓದಿರುವುದಿಲ್ಲ. ಅದೇ ರೀತಿ ಈರಪ್ಪ ರವರು ಈ ದಾವೆಯಲ್ಲಿ ಹಾಕಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಈ ಆಸ್ತಿಗಳ ಬಗ್ಗೆ ಆದ ವಾಟ್ನಿಯ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯ ಕಬ್ಜೆಯಲ್ಲಿ ನಾನು ಇರುತ್ತೇನೆ ಎಂದು ತೋರಿಸಲು ಯಾವುದೇ ಪಾಳೆ ಪಾವತಿಯನ್ನು ನಾನು ಹಾಜರು ಪಡಿಸಿರುವುದಿಲ್ಲ.

ದಾವಾ ಆಸ್ತಿಯನ್ನು ನಾನು 2011 ಸಾಲಿನಲ್ಲಿ ಖರೀದಿಸಿರುತ್ತೇನೆ. ಸದರಿ ಖರೀದಿ ಆದ

ಸಮಯ ನನಗೆ ದಾವೆ ಚಾಲ್ತಿಯಲ್ಲಿದ್ದ ಬಗ್ಗೆ ಗೊತ್ತಿರಲಿಲ್ಲ. 2 ನೇ ಪ್ರತಿವಾದಿ ಈ ದಾವಾ ಆಸ್ತಿಗೆ ಸಂಬಂಧಿಸಿದ ದಾವೆ 2008 ಸಾಲಿನಿಂದ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ ಎಂದು ನನಗೆ ಹೇಳಿರುವುದಿಲ್ಲ. ವಾದಿಯವರ ಅಜ್ಜಂದಿರಿಗೆ ಹಾಗೂ ತಮ್ಮಂದಿರಗೆ ಯಾವ ಯಾವ ಆಸ್ತಿ ಬಂದಿರುತ್ತದೆ ಎಂದು ನಾನು ಯಾವುದೇ ದಾಖಲಾತಿ ನೋಡಿರುವುದಿಲ್ಲ. ಖರೀದಿ ಮಾಡಿದ ಸಮಯದಲ್ಲಿ ನಾನು ಸದರಿ ಅವರ ನಡುವೆ ಆದ ವಾಟ್ನಿಯ ಬಗ್ಗೆ ಯಾವುದೇ ಡೈರಿ ನೋಡಿರುವುದಿಲ್ಲ. 2 ನೇ ಪ್ರತಿವಾದಿ ಈಗ ಜೀವಂತ ಇರುತ್ತಾರೆ.

ನಾನು 2 ನೇ ಪ್ರತಿವಾದಿಗೆ ಕೊಟ್ಟಿರುವ ರೂ.3,36,000/- ನಗದು ಹಣವನ್ನು ಎಲ್ಲಿಂದ ತಂದಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಹಣ ಕೊಟ್ಟಿರುವ ಬಗ್ಗೆ ಎಂದು ಬಾಂಡ ಇರುತ್ತದೆ ಸದರಿ ಬಾಂಡ ಮನೆಯಲ್ಲಿ ಇರುತ್ತದೆ ಹಾಜರು ಪಡಿಸಬೇಕಾದರೆ ಹಾಜರು ಪಡಿಸುತ್ತೇನೆ. ಸದರಿ ಬಾಂಡದಲ್ಲಿ ಇಷ್ಟು ಹಣ ಮುಟ್ಟಿರುತ್ತದೆ ಎಂದು ಬರೆದಿರುತ್ತದೆ. ಸದರಿ ಬಾಂಡನ್ನು 2011 ಸಾಲಿನಲ್ಲಿ ಮಾಡಿಕೊಂಡಿರುತ್ತೇನೆ ಆದರೆ ದಿನಾಂಕ ಹಾಗೂ ತಿಂಗಳು ನೆನಪಿರುವುದಿಲ್ಲ. ನನ್ನ ಬಳಿ ಬಾಂಡ ಇದ್ದ ಬಗ್ಗೆ ನಾನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಸದರಿ ಬಾಂಡ ಖರೀದಿ ಮಾಡಿದ ದಿನದ ಬಾಂಡ ಆಗಿರುತ್ತದೆ. ಸದರಿ ಬಾಂಡಗೆ ಖನಗಾಂವ ಗ್ರಾಮದ ಹಿರಿಯರು ಸಹಿ ಮಾಡಿರುತ್ತಾರೆ. ಖರೀದಿ ಪತ್ರಕ್ಕೆ ಈರಪ್ಪ ರವರ ಸಹಿ ಇರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಯಾವ ಅಡಚಣೆ ಇತ್ತು ಎಂದರೆ ಸಾಕ್ಷಿಯು ಮನೆತನದ ಅಡಚಣೆ ಇತ್ತು ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿ ಅಡ್ಡಾಡುತ್ತಾರೆ ಹಾಗೂ ಅವರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಸಾಮರ್ಥ್ಯ ಇರುತ್ತದೆ. ಉತಾರಕ್ಕೆ ಹೆಸರು ಹಚ್ಚಿಕೊಳ್ಳುವ ಸಂದರ್ಭದಲ್ಲಿ ಈರಪ್ಪಗೆ ನೋಟಿಸ ಕೊಟ್ಟಿರುವುದಿಲ್ಲ. ನಾನು ಡೈರಿ ಸಂಖ್ಯೆ6998 ನೇದ್ದನ್ನು ಹಾಜರು ಪಡಿಸಿರುವುದಿಲ್ಲ. ಡೈರಿ ಸಂಖ್ಯೆ6998 ಎದರ ಬಗ್ಗೆ ಇರುತ್ತದೆ ಎಂದು ನಾನು ನೋಡಿರುವುದಿಲ್ಲ. ಇವತ್ತಿನವರೆಗೂ ಸದರಿ ಡೈರಿಯನ್ನು ನಾನು ತೆಗೆಯಿಸಿ ನೋಡಿರುವುದಿಲ್ಲ. ಸದರಿ ಡೈರಿ ಯಾವ ಹೊಲಕ್ಕೆ ಸಂಬಂಧಿಸಿದ ಡೈರಿ ಎಂದು ನಾನು ನೋಡಿರುವುದಿಲ್ಲ. ಅದೇ ರೀತಿ ಡೈರಿ ನಂ.8092 ನೇದ್ದನ್ನು ಹಾಜರು ಪಡಿಸಿರುವುದಿಲ್ಲ. ಅದೇ ರೀತಿ ಡೈರಿ ನಂ.254 ನೇದ್ದನ್ನು ಹಾಜರು ಪಡಿಸಿರುವುದಿಲ್ಲ. ಈ ದಾವೆಯಲ್ಲಿ ಯಾವ ಡೈರಿಗಳನ್ನು

ಹಾಜರು ಪಡಿಸಿದ್ದಿರಿ ಎಂದು ನೊಡಿದ್ದಿರಾ ಎನ್ನುವ ಪ್ರಶ್ನೇಗೆ ಸಾಕ್ಷಿಯು 2011 ಸಾಲಿನ ನಂತರ ಆದ ಡೈರಿಗಳನ್ನು ನೋಡಿರುತ್ತೇನೆ ಆದರೆ ಅದರ ಪೂರ್ವದಲ್ಲಿ ಆದ ಡೈರಿಗಳನ್ನು ನೋಡಿರುವುದಿಲ್ಲ ಹಾಗೂ ಹಾಜರು ಪಡಿಸಿರುವುದಿಲ್ಲ.

ದಾವಾ ಆಸ್ತಿ ಬಸಲಿಂಗಪ್ಪ, ಈರಪ್ಪ ಹಾಗೂ ಬಸವಣ್ಣೆಪ್ಪ ರವರ ಮನೆತನದ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರವರ ನಡುವೆ ಆದ ಪಾಲಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಇಂದಿಗೂ ಕೂಡಾ ದಾವಾ ಆಸ್ತಿ ವಾದಿಯವರು ಹಾಗೂ ಪ್ರತಿವಾದಿ ನಂ.1 ರಿಂದ 5 ರವರ ಕಬ್ಜೆಯಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ. ಈಗ ಈರಪ್ಪ ರವರ ಪಾಲಿಗೆ ಬಂದಿರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು 2 ನೇ ಪ್ರತಿವಾದಿ ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಎಷ್ಟು ಆಸ್ತಿಗಳನ್ನು ಸೇರಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ವಾದಿಯವರು ಎಂತಹ ದಾವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಕೇವಲ ಖರೀದಿ ಬಗ್ಗೆ ಮಾಹಿತಿ ಇರುವುದಿಲ್ಲ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

**(Smt. Surya Prabha H.D)**
**Addl. CJ & JMFC, Gokak**